ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ. PW-2

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ಃ 06.03.2025
ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ

ನಾನು ಈ ದಾವೆಯಲ್ಲಿ ವಾದಿ ಸಂಖ್ಯೆ 5(ಎ) ಆಗಿದ್ದು, ನನ್ನ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ ಎಂದು, ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ವಿಷಯಗಳು ಸತ್ಯ ಇರುತ್ತವೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಹೆಬ್ಬೆಟ್ಟಿನ ಗುರುತು ನನ್ನದಾಗಿರುತ್ತದೆ ಎಂದು ನುಡಿದಿರುತ್ತಾರೆ.

ಈ ದಾವೆಗೆ ಸಂಬಂಧಿಸಿದಂತೆ ಸಾಕ್ಷಿಯು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ಪಹಣಿ ಪತ್ರಿಕೆಯನ್ನು ನಿಪಿ.1 ಎಂದು, ಮ್ಯೂಟೇಷನ್ ರಿಜಿಸ್ಟರ್ ನ ದೃಢೀಕೃತ ನಕಲು ಪ್ರತಿಯನ್ನು ನಿಪಿ.2 ಎಂದು, ಋಣಭಾರ ರಾಹಿತ್ಯ ಪ್ರಮಾಣ ಪತ್ರದ ದೃಢೀಕೃತ ನಕಲು ಪ್ರತಿಯನ್ನು ನಿಪಿ.3 ಎಂದು, ಲೀಗಲ್ ನೋಟೀಸನ್ನು ನಿಪಿ.4 ಎಂದು, ಮೂರು ಅಂಚೆ ರಶೀದಿಗಳನ್ನು ಕ್ರಮವಾಗಿ ನಿಪಿ.5 ರಿಂದ ನಿಪಿ.7 ಎಂದು, ಅಂಚೆ ಲಕೋಟೆಯನ್ನು ಕ್ರಮವಾಗಿ ನಿಪಿ.8 ಎಂದು, ನಿಪಿ.8 ರಲ್ಲಿದ್ದ ಲೀಗಲ್ ನೋಟೀಸನ್ನು ನಿಪಿ.8(ಎ) ಎಂದು, ಎರಡು ಅಂಚೆ ಸ್ವೀಕೃತಿ ಪತ್ರಗಳನ್ನು ಕ್ರಮವಾಗಿ ನಿಪಿ.9 ಮತ್ತು 10 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.